# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: | 975 |
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು) |
| ಉತ್ತರಿಸುವ ದಿನಾಂಕಃ | 21.09.2022 |
| ಉತ್ತರಿಸುವ ಸಚಿವರು: | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಮಳೆಗಾಲದ ಪರಿಣಾಮವಾಗಿ ರಾಜ್ಯದಲ್ಲಿ ಹಾಳಾಗಿರುವ ರಸ್ತೆಗಳ ಸಂಖ್ಯೆ ಎಷ್ಟು; ಸದರಿ ರಸ್ತೆಗಳು ಯಾವ ರೀತಿ ಮತ್ತು ಯಾವ ಕಾರಣಗಳಿಂದಾಗಿ ಹಾಳಾಗಿವೆ; | ಮಳೆಗಾಲದ ಪರಿಣಾಮವಾಗಿ ರಾಜ್ಯದಲ್ಲಿ ಹಾಳಾಗಿರುವ ರಸ್ತೆಗಳ ವಿವರಗಳು ಈ ಕೆಳಕಂಡಂತಿದೆ:<br><table><tr><th>ವಲಯ</th><th>SH (ಕಿ.ಮೀ. ಗಳಲ್ಲಿ)</th><th>MDR (ಕಿ.ಮೀ. ಗಳಲ್ಲಿ)</th></tr><tr><td>ಉತ್ತರ</td><td>556.80</td><td>1124.14</td></tr><tr><td>ದಕ್ಷಿಣ</td><td>412.77</td><td>746.63</td></tr><tr><td>ಈಶಾನ್ಯ</td><td>218.73</td><td>237.20</td></tr><tr><td>ಕೇಂದ್ರ</td><td>552.00</td><td>1101.00</td></tr><tr><td>ರಾಷ್ಟ್ರೀಯ ಹೆದ್ದಾರಿ</td><td colspan="2">58.23</td></tr></table><br>ಪ್ರಸಕ್ತ ಸಾಲಿನಲ್ಲಿ ವಾಡಿಕೆ ಮಳೆಗಿಂತ 212 ಮಿಮಿ ಅಧಿಕ ಮಳೆಯಿಂದಾಗಿ ಹಲವಾರು ಕಡೆ ರಸ್ತೆಗಳು ಕೊಚ್ಚಿಹೋಗಿರುವುದು ಮತ್ತು ನೆನೆದ ರಸ್ತೆಗಳಲ್ಲಿ ಅಧಿಕಭಾರ ಹೊತ್ತ ವಾಹನಗಳ ಸಂಚಾರದಿಂದಾಗಿಯೂ ರಸ್ತೆಗಳು ಅಲ್ಲಲ್ಲಿ ಕುಸಿತ ಉಂಟಾಗಿ, ತಗ್ಗುಗುಂಡಿಗಳು ಬಿದ್ದು ರಸ್ತೆಗಳು ಹಾಳಾಗಿರುತ್ತವೆ. |
| ಆ) | ಮಳೆಗಾಲಕ್ಕೆ ಹಾಳಾಗುವಂತ ರಸ್ತೆಗಳನ್ನು ಯಾವ ರೀತಿಯ ತಂತ್ರಜ್ಞಾನದಿಂದ ನಿರ್ಮಿಸಲಾಗುತ್ತಿದೆ; | ಹಾನಿಗೊಂಡ ರಸ್ತೆಗಳನ್ನು ವಾಹನ ಸಾಂದ್ರತೆಗನುಗುಣವಾಗಿ IRC Code & MORTH Specifications ಪ್ರಕಾರ ವಿನ್ಯಾಸಗೊಳಿಸಿ ರಸ್ತೆ ಸುಧಾರಣೆ ಮಾಡಲಾಗುತ್ತದೆ.<br><br>ಅಲ್ಲದೆ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ಕೇಂದ್ರ ಭೂಸಾರಿಗೆ ಮಂತ್ರಾಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ವಯ ಕೈಗೊಳ್ಳಲಾಗುತ್ತದೆ. |
| ಇ) | ರಸ್ತೆ ಹಾಳಾಗುವಿಕೆಗೆ ತಂತ್ರಜ್ಞಾನ ಕಾರಣವೇ; ಅಥವಾ ನಿರ್ಮಿಸುತ್ತಿರುವ ರೀತಿ ಕಾರಣವೇ; (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸಕ್ತ ಸಾಲಿನಲ್ಲಿ ವಾಡಿಕೆಗಿಂತ ಅಧಿಕ ಪ್ರಮಾಣದ ಮಳೆಯಾಗಿರುವುದರಿಂದಲೂ ಆಯಾಯ ಪ್ರದೇಶದ ಭೌಗೋಳಿಕ ಕಾರಣಗಳಿಂದ ಕೆಲವು ರಸ್ತೆಗಳು ಹಾಳಾಗುವಿಕೆಗೆ ಬಹುತೇಕ ಕಾರಣವಾಗಿರುತ್ತದೆ. ರಸ್ತೆ ಹಾಳಾಗುವಿಕೆಗೆ ತಂತ್ರಜ್ಞಾನವಾಗಲಿ ಅಥವಾ ನಿರ್ಮಿಸುವ ರೀತಿ ಕಾರಣವಾಗುವುದಿಲ್ಲ. |
| ಈ) | ಸದರಿ ರಸ್ತೆ ನಿರ್ಮಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು? | 2022-23ನೇ ಸಾಲಿನಲ್ಲಿ ನಾಲ್ಕು ವಲಯಗಳಲ್ಲಿ ಅತಿವೃಷ್ಠಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆ / ಸೇತುವೆ / ಕಟ್ಟಡಗಳ ದುರಸ್ಥಿ ಕಾಮಗಾರಿಗಳಿಗೆ ಈಗಾಗಲೇ ರೂ.200.00 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನದಲ್ಲಿ |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ತುರ್ತು ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಸಾರ್ವಜನಿಕ ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲಾಗುವುದು.<br><br>ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೇಂದ್ರ ಸರ್ಕಾರದಿಂದ ಒದಗಿಸಲಾಗುವ ಅನುದಾನಕ್ಕನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. |

ಲೋಇ 114 ಸಿಕ್ಯೂಎನ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು